ಏನೇ ಮಾಡುತ್ತಿರಲಿ ಬರೆಯುತ್ತಲೇ ಇರುತ್ತಿದ್ದೆ. ಪ್ರಾಣಿಗಳಂತೆ ಸಹಜವಾಗಿ ಬದುಕುತ್ತಿದ್ದೆ. ಈಗ ಅನ್ನಿಸುತ್ತದೆ ನನ್ನೊಳಗಿನ ಭಾಗವೊಂದು ಕಲಾವಿದೆಯಾಗಲು ಸಿದ್ಧತೆ ನಡೆಸಿತ್ತು. ಯಾವುದೇನಾದರೂ ಆಗಲಿ ಎಂದು ಅಪ್ರಜ್ಞಾಪೂರ್ವಕವಾಗಿ ಮನಸ್ಸು ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿತ್ತು. ನಮ್ಮೆಲ್ಲರ ಬದುಕು ಹೀಗೆ ಅಪ್ರಜ್ಞಾಪೂರ್ವಕವಾಗಿ ನಾವು ಏನಾಗಬೇಕೋ ಅಥವ ಏನು ಮಾಡಬೇಕೋ ಅದಕ್ಕಾಗಿ ಸಿದ್ಧತೆ ನಡೆಸುತ್ತಲೇ ಇರುತ್ತದೆ ಎನ್ನುವುದು ನನ್ನ ಗಾಢ ನಂಬಿಕೆ.

ಒಬ್ಬ ಮನುಷ್ಯನ ಬದುಕನ್ನು ಆತನ ಅನುಭವಗಳು, ಅವನ ಜೀವನದಲ್ಲಿ ಏನು ಘಟಿಸಿತು ಎನ್ನುವುದರ ಆಧಾರದ ಮೇಲೆ ವಿವರಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ಗಾಢ ನಂಬಿಕೆ. ಕಾವ್ಯ, ತತ್ತ್ವಶಾಸ್ತ್ರಗಳೆಲ್ಲದರ ಹೊರತಾಗಿಯೂ ನಮ್ಮ ಹಣೆಬರಹ ನಾವು ಓದಲಾರೆವು.

◆ **ನಿಮ್ಮೊಳಗಿನ ಆಸೆಯನ್ನು ಹರಳುಗಟ್ಟಿಸಿದ ನಿರ್ದಿಷ್ಟ ಘಟನೆಗಳು ಇವೆಯೇ? Pale Horse, Pale Riderನ ಮಿರಂಡಾಳ ಅನುಭವದಂತೆ...**

ಹೌದು. ಮೊದಲನೆಯ ಮಹಾಯುದ್ಧದ ಕೊನೆಯಲ್ಲಿ ಪ್ಲೇಗ್ ಬಂದಿತ್ತು. ಆ ಸಮಯದಲ್ಲಿ ಇನ್ನೇನು ಸತ್ತೇ ಹೋಗುತ್ತೇನೆ ಅನ್ನಿಸಿತ್ತು. ಅದು ನನ್ನ ಬದುಕನ್ನು ಇಬ್ಭಾಗವಾಗಿಸಿತು. ಅದಾದ ಮೇಲೆ ನಾನು ವಿಚಿತ್ರವಾಗಿ ಬದಲಾದೆ. ಮತ್ತೆ ಪ್ರಪಂಚದೊಂದಿಗೆ ಹೋಗಿ ಬದುಕಲು ಸುಮಾರು ಸಮಯ ಬೇಕಾಯಿತು. ಎಲ್ಲ ರೀತಿಯಲ್ಲೂ "ಒಂಟಿಯಾಗಿ" ಬಿಟ್ಟಿದ್ದೆ. ಸಾವು ಅಂದರೆ ಏನು? ಅದು ಹೇಗಿರುತ್ತೆ ಅನ್ನುವುದರ ಅನುಭವವಾಯಿತು. ಕ್ರಿಶ್ಚಿಯನ್ನರು ಹೇಳುವಂತೆ "ಪರಮ ಸುಖಕರ ದೃಷ್ಟಿ" (beatific vision) ಕಂಡಿತ್ತು. ಗ್ರೀಕರು ಅದನ್ನು "ಆನಂದದ ದಿನ" ಎನ್ನುತ್ತಾರೆ. ಸಾಯುವ ಮುಂಚೆ ಕಾಣುವ ಆನಂದದ ದೃಷ್ಟಿ. ನಿಮಗದು ಕಂಡು ಸಾಯದೆ ಉಳಿದರೆ ನೀವು ಬೇರೆಯವರಂತೆ ಇರುವುದಿಲ್ಲ. ನಿಮ್ಮನ್ನು ನೀವು ಹಾಗೆಂದುಕೊಂಡು ಮೋಸಗೊಳಿಸಿಕೊಳ್ಳಲು ಸಾಧ್ಯವಿಲ್ಲ. ನಾನು ಆ ತಪ್ಪು ಮಾಡಿದೆ. ನಾನು ಉಳಿದವರಂತೆ ಇದ್ದೀನಿ ಅಂದುಕೊಂಡು ಅವರಂತೆ ಬದುಕಲು ಯತ್ನಿಸುತ್ತಿದ್ದೆ. ನನ್ನ ಅವಶ್ಯಕತೆಗಳು ಬೇರೆ. ನಾನು ನನ್ನಂತೆ ಬದುಕಬೇಕು ಎಂದು ಅರ್ಥವಾಗಲು ಬಹಳ ಸಮಯ ಹಿಡಿಯಿತು.

◆ **ಅದು ನಿಮ್ಮನ್ನು ಮುಕ್ತಗೊಳಿಸಿತೆ?**

ಎದ್ದು ಪಲಾಯನ ಮಾಡಿದೆ. ಮೆಕ್ಸಿಕೊಗೆ ಓಡಿಹೋದೆ. ಅಲ್ಲಿನ ಕ್ರಾಂತಿಯಲ್ಲಿ ಭಾಗವಹಿಸಿದೆ.

◆ **ಅದು 1921ರ ಒಬ್ರಿಗಾನ್ ಕ್ರಾಂತಿ (ಪುನರುಜ್ಜೀವನ ಕ್ರಾಂತಿ) ಅಲ್ಲವೇ?**

ಹೌದು. ಮೆಕ್ಸಿಕೊಗೆ ಹೋಗಿದ್ದು ಅಜ್ಟೆಕ್ ಮತ್ತು ಮಾಯನ್ ಕಲಾ ವಿನ್ಯಾಸಗಳನ್ನು ಕಲಿಯಲು. ನ್ಯೂಯಾರ್ಕಿನಿಂದ ಯುರೋಪಿಗೆ ಹೋಗಲು ಸಿದ್ಧತೆ ನಡೆಸಿದ್ದೆ. ಆ ಸಮಯದಲ್ಲಿ ನ್ಯೂಯಾರ್ಕಿನಲ್ಲಿ ಬಹಳಷ್ಟು ಮಂದಿ ಮೆಕ್ಸಿಕನ್ ಕಲಾವಿದರಿದ್ದರು. ಅವರೆಲ್ಲ ಪುನರುಜ್ಜೀವನ/ನವೋದಯದ ಕುರಿತು ಮಾತಾಡುತ್ತಿದ್ದರು. "ಯುರೋಪಿಗೆ ಹೋಗಬೇಡ, ಮೆಕ್ಸಿಕೊಗೆ ಹೋಗು. ಅಲ್ಲಿ ಬಹಳಷ್ಟು ರೋಮಾಂಚಕ ಸಂಗತಿಗಳು ನಡೆಯಲಿವೆ" ಎಂದು ಹೇಳಿದರು. ಅವರು ಹೇಳಿದ್ದು ಸರಿ! ಒಬ್ರಿಗಾನ್ ಕ್ರಾಂತಿಯ ಕಡೆ ಓಡಿದೆ. ಅದು ನನ್ನ ಬದುಕಿನ ಅತ್ಯಂತ ಅದ್ಭುತ, ಸಹಜ, ಸ್ವಾಭಾವಿಕ ಅನುಭವ. ಅಷ್ಟೇ ರೋಮಾಂಚಕ ಸಮಯ ಕೂಡ. ಎಲ್ಲವೂ ಜೀವಂತವಾಗಿದ್ದರೂ ಅದರ ನಡುವೆ ಸಾವಿತ್ತು. ಯಾರೂ ಅದರ ಬಗ್ಗೆ ಯೋಚಿಸಲಿಲ್ಲ.